ಒಂದಾಣೆ ಮಾಲೆ 215

ಕಬೀರ ವಚನ ಸಂಗ್ರಹ

(ಮೂಲ ಹಿಂದೀ ವಚನಗಳೊಂದಿಗೆ)

❊

ಅನುವಾದಕರು:
ಶ್ರೀ। ಕೆ. ಎಸ್. ಸೂರ್ಯನಾರಾಯಣನ್,
ಕೆಂಬನಪಾಳ್ಯ.

❊

1958

ಬೆಲೆ: ಆಣೆ ಒಂದು.

ಒಂದಾಣೆ ಮಾಲೆ, ಮಂಗಳೂರು.

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ—

೧. ಲೌಕಿಕ ನ್ಯಾಯಗಳು
೨. ತತ್ಸಮ-ತದ್ಭವ ಕೋಶ (ಭಾಗ ೧ ಮತ್ತು ೨)
೩. ಅಭಿಜ್ಞಾನ ಶಾಕುಂತಲದಲ್ಲಿ ಲೋಕನೀತಿ
೪. ಸಂಜ್ಞಾ ಜ್ಞಾನಕೋಶ
೫. ಪ್ರಥಮ ಚಿಕಿತ್ಸೆಯ ಕೈಪಿಡಿ
೬. ಪಂಡಿತ ಜವಾಹರಲಾಲರ ಜೀವನ ಚರಿತ್ರ
೭. ಬಾಬೂ ರಾಜೇಂದ್ರ ಪ್ರಸಾದರ ಜೀವನ ಚರಿತ್ರ

ಭರ್ತೃಹರಿಯ ನೀತಿಶತಕ (ಮೂರು ಭಾಗಗಳಲ್ಲಿ, ಶ್ಲೋಕಗಳು ಮತ್ತು ಕನ್ನಡ ತಾತ್ಪರ್ಯ ಸಹಿತ), ಚಾಣಕ್ಯ ಶತಕ (ಶ್ಲೋಕಗಳು ಮತ್ತು ತಾತ್ಪರ್ಯ ಸಹಿತ), ಸೂಕ್ತಿಗಳು, ಸುಭಾಷಿತ, ಒಗಟುಗಳು ಇನ್ನೂ ಅನೇಕಾನೇಕ ಉತ್ತಮ ಪುಸ್ತಕಗಳು ಪ್ರಕಟವಾಗಿವೆ.

1954ನೇ ಸೆಪ್ಟೆಂಬರ ಮೊದಲನೇ ವಾರದಿಂದ, ಈ ಪುಸ್ತಕ ಅಂದರೆ "ಕಬೀರ ವಚನ ಸಂಗ್ರಹ"—ಪ್ರಕಟವಾಗುವ 1958ನೇ ದಶಂಬರ ತಿಂಗಳ ಎರಡನೇ ವಾರದ ವರೆಗೆ ಒಟ್ಟಿಗೆ,215 ಪುಸ್ತಕಗಳು ಪ್ರಕಟವಾಗಿವೆ. ವಾರಕ್ಕೊಂದು ಹೊಸ ಪುಸ್ತಕ ಪ್ರಕಟವಾಗುತ್ತಿದೆ. ಪ್ರತಿಯೊಂದನ್ನೂ ಕೊಂಡುಕೊಳ್ಳಿರಿ.

— ಒಂದಾಣೆ ಮಾಲೆ —

ಪ್ರಭಾತ ಆಫೀಸು — ರಥಬೀದಿ — ಮಂಗಳೂರು-೧.

ಮುನ್ನುಡಿ

ಕಬೀರರು ವಿಕ್ರಮ ಸಂವತ್ ೧೪೫೬ರಲ್ಲಿ ಜನ್ಮವೆತ್ತಿದರು. ಜನಶ್ರುತಿಯ ಆಧಾರದಂತೆ ಅವರು ಹುಟ್ಟಿದ್ದು ಒಬ್ಬ ಬ್ರಾಹ್ಮಣ ವಿಧವೆಯಲ್ಲಿ. ಬೆಳೆದುದು ಅಲೀ ಅಥವಾ ನೀರೂ ಎಂಬ ಮುಸಲ್ಮಾನ ನೇಯ್ಗೆಯವನ ಮನೆಯಲ್ಲಿ. ಪ್ರಾರಂಭದಿಂದಲೂ ಅವರಲ್ಲಿ ಹಿಂದೂ ಭಾವನೆಯ ಉಪಾಸನೆಯೇ ಮುಖ್ಯವಾಗಿತ್ತು. ರಾಮನಾಮ ಜಪವೇ ಅವರಿಗೆ ಪ್ರಿಯವಾದ ಮಂತ್ರವಾಗಿತ್ತು. ರಾಮಾನಂದರ ಶಿಷ್ಯರಾಗಿದ್ದ ಕಬೀರರು ದೇಶಾಟನೆ ಮಾಡಿ, ಹಠಯೋಗಿಗಳ ಮತ್ತು ಸೂಫೀ ಮುಸಲ್ಮಾನ ಫಕೀರರ ಸತ್ಸಂಗ ಮಾಡಿ ನಿರ್ಗುಣೋಪಾಸನೆಯ ಕಡೆಗೆ ಮನಸ್ಸು ಓಡಿಸಿ, 'ಕಬೀರ ಪಂಥ' ಎಂಬ ತಮ್ಮದೇ ಆದ ಒಂದು ನವೀನ ಸಂಪ್ರದಾಯದ ಪ್ರವರ್ತಕರಾದರು.

ಕಬೀರರ ಭಕ್ತಿಪದ್ಧತಿಯು ಆಡಂಬರರಹಿತವಾದುದು. ನಿಷ್ಕಾಮ ಭಾವನೆಯಿಂದ ಪೂಜಿಸಬೇಕು. ಯಾವ ರೀತಿಯ ಬಾಹ್ಯಾಡಂಬರವೂ ಕೂಡದು. ಭಕ್ತಿಯೊಂದೇ ಮುಕ್ತಿಗೆ ಸಾಧನ. ರಾಮರಹೀಮರು ಒಂದೇ ಎಂಬುದು ಅವರ ಸಿದ್ಧಾಂತವಾಗಿತ್ತು; ಆಡಂಬರಗಳನ್ನೂ ಅಂಧಶ್ರದ್ಧೆಗಳನ್ನೂ ಅವರು ತೀವ್ರವಾಗಿ ಖಂಡಿಸಿದ್ದಾರೆ.

ಪ್ರಸ್ತುತ ಸಂಗ್ರಹದಲ್ಲಿ ಕಬೀರ ದೋಹಾಳಿಯ "ದಿವ್ಯಾನುಭವ" ಮತ್ತು "ಬಾಧಾಏಂ" (ವಿಘ್ನಗಳು) ಭಾಗಗಳನ್ನು ಆರಿಸಿ ಅವುಗಳ ಮೂಲ ಪದ್ಯವನ್ನು (ದೋಹೆ) ಉದ್ಧರಿಸಿ, ಅದರ ಅರ್ಥವನ್ನು ಕನ್ನಡಕ್ಕೆ ಅನುವಾದಿಸಲಾಗಿದೆ. ಅವರ ಭಕ್ತಿಪದ್ಧತಿಯ ಅರಿವು ಎಲ್ಲ ಜನರಿಗೂ ಆಗಲೆಂಬುದೇ ಅನುವಾದದ ಆಶಯವಾಗಿದೆ.

ಕೆ. ಎಸ್. ಸೂರ್ಯನಾರಾಯಣನ್,
ಕೆಂಪನಪಾಳ್ಯ.

ಕಬೀರ ವಚನ ಸಂಗ್ರಹ

ಆತಮ ಅನುಭವ ಜ್ಞಾನಕೀ, ಜೋ ಕೋಇ ಪೂಛೈ ಬಾತ್ ।
ಸೋ ಗೂಂಗಾ ಗುಡ ಖಾಇಕೈ, ಕಹೈ ಕೌನ ಮುಖ ಸ್ವಾದ್ ॥ ೧ ॥

ಅರ್ಥ: ಯಾರಾದರೂ ಬಂದು ಆತ್ಮಾನುಭವ ಜ್ಞಾನದ ವಿಷಯವಾಗಿ ನನ್ನನ್ನು ಕೇಳಿದರೆ, ಆ ಅನುಭವವನ್ನು ಹೇಗೆ ಹೇಳಲಿ? ಶಬ್ದಗಳಲ್ಲಿ ವರ್ಣಿಸಲಸದಳವಾದ ಸುಖಾನುಭವವಾಗಿದೆ. (ಮೂಕನ ಬೆಲ್ಲದ ರುಚಿಗೆ ಸಮಾನವಾಗಿದೆ) ಮೂಕ ಬೆಲ್ಲ ತಿಂದು ಅದರ ರುಚಿಯನ್ನು ಯಾವ ಬಾಯಿಂದ ಹೇಳಿಯಾನು?

ಜ್ಯೋಂ ಗೂಂಗೇ ಕೇ ಸೈನಕೊ, ಗೂಂಗಾ ಹೀ ಪಹಿಚಾನ್ ।
ತ್ಯೋಂ ಜ್ಞಾನೀ ಕೇ ಸುಕ್ಖಕೊ, ಜ್ಞಾನೀ ಹೋಯ್ ಸೋಜಾನ್ ॥ ೨ ॥

ಮೂಕನ ಸನ್ನೆಯನ್ನು ಮೂಕನೇ ತಿಳಿದುಕೊಳ್ಳುವಂತೆ ಆತ್ಮಜ್ಞಾನಿಯ ಸುಖವನ್ನು ಆತ್ಮಜ್ಞಾನಿಯೇ ತಿಳಿದುಕೊಳ್ಳುತ್ತಾನೆ.

ಕಾಗದ ಲಿಖೈ ಸೋ ಕಾಗದೀ, ಕೀ ಬ್ಯೋಹಾರೀ ಜೀವ ।
ಆತಮ ದೃಷ್ಟಿ ಕಹಾಂ ಲಿಖೈ, ಜಿತ ದೇಖೈ ತಿತ ಪೀವ ॥ ೩ ॥

ಯಾವನು ತನ್ನ ಜ್ಞಾನವನ್ನು ಕಾಗದದ ಮೇಲೆ ಬರೆಯುತ್ತಾನೋ ಅದು ನಕಲಾಗುತ್ತದೆ (Copy) ಅಥವಾ ಅದು (ಅವಿದ್ಯೆಯ ಕಾರಣದಿಂದ ಪ್ರಪಂಚದಲ್ಲಿ ಸುತ್ತುವ) ವ್ಯಾವಹಾರಿಕ ಜೀವವಾಗುತ್ತದೆ. ಆದರೆ ಯಾರಿಗೆ ಆತ್ಮದೃಷ್ಟಿಯು ಪ್ರಾಪ್ತವಾಗಿದೆಯೋ ಆವನು ತನ್ನ ಜ್ಞಾನವನ್ನು ಎಲ್ಲಿ ಬರೆಯಬೇಕು? ಅವನು ನೋಡಿದಲ್ಲೆಲ್ಲ ಈಶ್ವರನೇ ದೃಷ್ಟಿಗೋಚರನಾಗುತ[illegible]

ಲಿಖಾ ಲಿಖೀ ಕೀ ಹೈ ನಹೀಂ, ದೇಖಾದೇಖೀ ಬಾತ್ ।
ದುಲ[illegible]ಲಹಿನ ಮಿಲಗಯೇ, ಫೀಕೀ ಪಡೀ ಬರಾತ್ ॥ ೪ ॥

ಆ[illegible]ಷ್ಟಿಯು ಮೂಲಕ ಪಡೆದ ಆತ್ಮಜ್ಞಾನ[illegible]ವನ್ನು ಬರೆಯುವ ವಸ್ತುವಲ್ಲ. [illegible] ಪ್ರತ್ಯಕ್ಷದ ಮೂಲಕ ನೋಡಬೇಕು, ಇಲ್ಲವೆ ಅನುಭವ ಹೊಂದ[illegible] ಆತ್ಮಾನುಭವದ ಸಂಕೇತ ಜೀವಾತ್ಮ—ಪರಮಾತ್ಮರ

ಮಿಲನವಾದಾಗ ಮೋಹದಲ್ಲಿರಿಸುವ ಭೌತಿಕ ತತ್ವಗಳೆಲ್ಲವೂ ಒಣಗಿ ಹೋಗುತ್ತವೆ.

ಟಿಪ್ಪಣಿ: ಈ ಪದ್ಯದ ಸರಳ ಅರ್ಥವಿದು, ವಧೂವರರ ಸಂಯೋಗವು ಕೇವಲ ಕಾಗದ ಮಾತಲ್ಲ. ಪರಸ್ಪರ ನೋಡಿದ ಮೇಲೆಯೇ ಅವರ ಸಂಯೋಗವಾಗುವುದು. ವಧೂವರರು ಮಿಲನವಾದಾಗ ವರ-ಯಾತ್ರೆಯು (ವರನ ಜೊತೆಯಲ್ಲಿ ಹೆಚ್ಚು ಜನರು ಹೆಣ್ಣಿನ ಮನೆಗೆ ಹೋಗುವುದು) ಅಪ್ರಯೋಜಕವಾಗುತ್ತದೆ.

ಭರೋ ಹೋಯ ಸೋ ರೀತಈ, ರೀತೋ ಹೋಯ ಭರಾಯ್ |
ರೀತೋ ಭರೋ ನ ಪಾಇಯೇ, ಅನುಭವ ಸೋಇ ಕಹಾಯ್ ‖ ೫ ‖

ಯಾರು ಸ್ವಲ್ಪ ಜ್ಞಾನದಿಂದಲೇ ತನ್ನನ್ನು ತಾನು ವಿದ್ವಾಂಸನೆಂದು ತಿಳಿದುಕೊಳ್ಳುತ್ತಾನೋ, ಅವನು ಆತ್ಮಜ್ಞಾನ ಪಡೆದ ಮೇಲೆ ತನ್ನಲ್ಲಿ ಶೂನ್ಯದ ಅನುಭವವನ್ನು ಹೊಂದುತ್ತಾನೆ ಮತ್ತು ಅಜ್ಞಾನದ ಕಾರಣದಿಂದ ತನ್ನನ್ನು ಮಂದವೆಂದು ತಿಳಿಯುತ್ತಾನೆ. ಅವನು ಆತ್ಮಜ್ಞಾನವನ್ನು ಗಳಿಸಿದ ನಂತರ ಪರಿಪೂರ್ಣ (ವಿದ್ವಾಂಸ)ನಾಗುತ್ತಾನೆ. ಯಾವುದು ಶೂನ್ಯ ಮತ್ತು ಪರಿಪೂರ್ಣತೆಯ ವಿಭೇದವಿರದೆ ಸಮುದ್ರದಂತೆ ಗಂಭೀರವಾಗಿರುವುದೋ (ಸಮ ಅವಸ್ಥೆ) ಅದನ್ನೇ ನಿಜವಾದ ಅನುಭವವೆಂದು ಹೇಳಲ್ಪಡುವುದು.

ಎರಡನೇ ಅರ್ಥ: ಅಹಂಕಾರದ ಕಾರಣದಿಂದ ತನ್ನನ್ನು ತಾನೇ ವಿದ್ವಾಂಸನೆಂದು ಹೇಳಿಕೊಳ್ಳುವವನು ನಿಜವಾಗಿ ಶೂನ್ಯನು. ವಿನಮ್ರತೆಯ ಕಾರಣದಿಂದ ತಾನು ಖಾಲಿ (ಶೂನ್ಯ)ಯೆಂದು ತಿಳಿದುಕೊಳ್ಳುವವನು ವಿದ್ವಾಂಸನಾಗುತ್ತಾನೆ.

ಸಾಧು ಐಸಾ ಚಾಹಿಏ, ಜೈಸಾ ಸೂಪ ಸುಭಾಯ್ |
ಸಾರ ಸಾರ ಕೊ ಗಹಿ ರಹೈ, ಥೋಥಾ ದೇಇ ಉಡಾಯ್ ‖ ೬ ‖

ಸಾಧುವಿನ ಸ್ವಭಾವವು ಮೊರದಂತಿರಬೇಕು. ಮೊರವು ಸಾರ ತತ್ವಗಳನ್ನು ಇಟ್ಟುಕೊಂಡು ನಿಸ್ಸಾರ ವಸ್ತುಗಳನ್ನು ಹಾರಿಸಿಬಿಡುತ್ತದೆ.

ಔಗುನ ಕೊ ತೋ ನಾ ಗಹೈ, ಗುನ ಹೀ ಕೋ ಲೈಬೀನ್ |
ಘಟ ಘಟ ಮಹಂ ಕೈ ಮಧುಪ ಜ್ಯೋಂ, ಪರಮಾತಮ ಲೈ ಚೀನ್ ‖ ೭ ‖

ಸತ್ಪುರುಷನು ಈ ಪೃಥ್ವಿಯಲ್ಲಿ ವಿಹರಿಸುತ್ತಾ ಅವಗುಣಗಳನ್ನು ತೆಗೆದುಕೊಳ್ಳದೆ ಗುಣಗಳನ್ನು ಆರಿಸಿಕೊಳ್ಳುತ್ತಾನೆ. ಬೇರೆ ಬೇರೆ ಹೂಗಳ ರಸವನ್ನು ಪಾನಮಾಡುವ ಭ್ರಮರವು ಹೂಗಳ ಸುಗಂಧವನ್ನು ಗುರುತಿಸುವಂತೆ ಬೇರೆ ಬೇರೆ ಹೃದಯಗಳಲ್ಲಿರುವ ಪರಮಾತ್ಮನನ್ನು ಸಜ್ಜನನು ಗುರುತಿಸಿಕೊಳ್ಳುತ್ತಾನೆ.

ಹಂಸಾ ಪಯ ಕೊ ಕಾಢಿಲೇ, ಛೀರ ನೀರ ನಿರವಾರ್ ।
ಐಸೇ ಗಹೈ ಜೋ ಸಾರಕೋ, ಸೋ ಜನ ಉತರೈ ಪಾರ್ ॥ ೮ ॥

ಹಂಸವು ಹೇಗೆ ಹಾಲನ್ನೂ ನೀರನ್ನೂ ಪ್ರತ್ಯೇಕಿಸಿ (ಸಾರರೂಪ) ಹಾಲನ್ನೇ ತೆಗೆದುಕೊಳ್ಳುತ್ತದೋ ಹಾಗೆಯೇ ಯಾವನು ಪರಮಾತ್ಮತತ್ವವನ್ನು ಹಿಡಿದುಕೊಳ್ಳುತ್ತಾನೋ, ಆ ಮನುಷ್ಯ ಈ ಭವ-ಸಾಗರವನ್ನು ದಾಟಿಹೋಗುತ್ತಾನೆ.

ಛೀರ ರೂಪ ಸತನಾಮಹೈ, ನೀರ ರೂಪ ವ್ಯವಹಾರ್ ।
ಹಂಸ ರೂಪ ಕೋಇ ಸಾಧಹೈ, ತತಕಾ ಛಾನನ ಹಾರ್ ॥ ೯ ॥

ದೇವರ ಹೆಸರು ಹಾಲು ರೂಪವಾಗಿರುವುದರಿಂದ ಸಾರತತ್ವವಾಗಿದೆ. ಸಾಂಸಾರಿಕ ವ್ಯವಹಾರಗಳು ನೀರು ರೂಪವಾಗಿರುವುದರಿಂದ ನಿಸ್ಸಾರವಾಗಿವೆ. ಈ ರೀತಿಯಲ್ಲಿ ಸಾರಾಸಾರ ತತ್ವವನ್ನು ತಿಳಿದುಕೊಳ್ಳುವ ವಿವೇಕಿಯು ಹಂಸರೂಪದ ಸಾಧುವಾಗುವನು.

ಸಮದೃಷ್ಟೀ ಸತಗುರುಕಿಯಾ, ದೀಯಾ ಅವಿಚಲ ಜ್ಞಾನ್ ।
ಜಹಂ ದೇಖೌಂ ತಹಂ ಏಕಹೀ, ದೂಜಾ ನಾಹಿಂ ಆನ್ ॥ ೧೦ ॥

ಸದ್ಗುರುವು ದೃಢ ಜ್ಞಾನವನ್ನು ಕೊಟ್ಟು ನನಗೆ ಸಮ ದೃಷ್ಟಿಯನ್ನುಂಟುಮಾಡಿದ್ದಾನೆ. ಆದುದರಿಂದ ಈಗ ನಾನೆಲ್ಲಿ ನೋಡಿದರೂ ಪರಮಾತ್ಮನನ್ನೇ ನೋಡುತ್ತೇನೆ, ಬೇರೆ ಯಾರನ್ನೂ ಅಲ್ಲ.

ಸಮದೃಷ್ಟೀ ಸತಗುರುಕಿಯಾ, ಮೇಟಾ ಭರಮ ವಿಕಾರ್ ।
ಜಹಂ ದೇಖೌಂ ತಹಂ ಏಕಹೀ, ಸಾಹೆಬಕಾ ದೀದಾರ್ ॥ ೧೧ ॥

ಸದ್ಗುರುವು ಸುಡುವ ಕಾಮಕ್ರೋಧಾದಿ ಗುಣಗಳನ್ನು (ಮನೋವಿಕಾರಗಳನ್ನು) ನಾಶಮಾಡಿ ನನ್ನನ್ನು ಸಮದೃಷ್ಟಿಯುವನನ್ನಾಗಿ ಮಾಡಿ

ದ್ದಾನೆ. ಆದುದರಿಂದ ನಾನು ಈಗ ಎಲ್ಲ ಕಡೆಗಳಲ್ಲೂ ಈಶ್ವರನೊಬ್ಬನ ದರ್ಶನವನ್ನೇ ಮಾಡುತ್ತೇನೆ.

ಸಮದೃಷ್ಟೀ ತಬಜಾನಿಏ, ಸೀತಲ ಸಮತಾ ಹೋಯ್ ।
ಸಬ ಜೀವನ ಕೀ ಆತಮಾ, ಲಖೈ ಏಕ ಸೀ ಸೋಯ್ ॥ ೧೨ ॥

ಯಾರ ಹೃದಯದಲ್ಲಿ ಶಾಂತಿ (ಎಲ್ಲ ಧರ್ಮಗಳೊಡನೆ) ಸಮತಾ ಭಾವವಿದೆಯೋ, ಯಾವನು ಎಲ್ಲ ಪ್ರಾಣಿಗಳ ಆತ್ಮವನ್ನು ಒಂದೇ ಸಮನೆಂದು ನೋಡುತ್ತಾನೋ, ಅವನನ್ನೇ ಸಮದೃಷ್ಟಿಯುವನೆಂದು ತಿಳಿದು ಕೊಳ್ಳಬೇಕು.

ದುಖಮೆಂ ಸುಮಿರನ ಸಬಕರೈ, ಸುಖಮೆಂ ಕರೈ ನ ಕೋಯ್ ।
ಜೋ ಸುಖಮೆಂ ಸುಮಿರನ ಕರೈ, ತೋ ದುಖ ಕಾಹೇ ಹೋಯ್ ॥೧೩॥

ಸಂಕಟ ಬಂದಾಗ ವೆಂಕಟರಮಣ ಎಂದು ಎಲ್ಲರೂ ಹೇಳುತ್ತಾರೆ. ಸುಖದಲ್ಲಿ ಯಾರೂ ಅವನನ್ನು ಸ್ಮರಿಸುವುದಿಲ್ಲ. ಎಲ್ಲ ಜನರೂ ಸುಖದಲ್ಲಿರುವಾಗ ಈಶ್ವರನನ್ನು ಸ್ಮರಿಸುತ್ತಿದ್ದರೆ ಅವರಿಗೆ ದುಃಖವೇಕಾಗುತ್ತದೆ?

ಸುಖಮೆಂ ಸುಮಿರನ ನಾ ಕಿಯಾ, ದುಖಮೆಂ ಕೀಯಾ ಯಾದ್ ।
ಕಹ ಕಬೀರ ತಾದಾಸ ಕೀ, ಕೌನ ಸುನೈ ಫಿರಿಯಾದ್ ॥ ೧೪ ॥

ಸುಖದಲ್ಲಿ ಈಶ್ವರನ ಸ್ಮರಣೆಮಾಡದೆ, ಸಂಕಟ ಬಂದಾಗ ಅವನನ್ನು ಧ್ಯಾನಿಸಿದರೆ, ಆ ಭಕ್ತನ ಪ್ರಾರ್ಥನೆಯನ್ನು ಯಾರು ಕೇಳುತ್ತಾರೆ? ಎಂದು ಕಬೀರರು ಹೇಳುತ್ತಾರೆ.

ಸುಮಿರನ ಕೀ ಸುಧಿ ಯೋಂ ಕರೋ, ಜೈಸೇ ಕಾಮೀ ಕಾಮ್ ।
ಏಕ ಪಲಕ ಬಿಸರೈ ನಹೀಂ, ನಿಸ ದಿನ ಆಠೋ ಜಾಮ್ ॥ ೧೫ ॥

ಕಾಮೀ ಪುರುಷನು ಹೇಗೆ 'ಕಾಮ' (ವಿಷಯವಾಸನೆ)ದ ಸ್ಮರಣೆ ಮಾಡುತ್ತಿರುತ್ತಾನೋ, ಹಾಗೆ ಹಗಲೂ ರಾತ್ರೆ ನಾಮಸ್ಮರಣೆ ಮಾಡುತ್ತಿರು. ಕಾಮೀ ಪುರುಷನು ಹಗಲೂ ರಾತ್ರೆಯ ಎಂಟು ಜಾಮಗಳಲ್ಲಿ ಒಂದು ಕ್ಷಣವೂ ಕೂಡ ವಿಷಯವಾಸನೆಯನ್ನು ಮರೆಯುವುದಿಲ್ಲ.

ಸುಮಿರನ ಸೋಂ ಮನ ಲಾಇಏ, ಜೈಸೇ ನಾದ ಕುರಂಗ್ ।
ಕಹ ಕಬೀರ ಬಿಸರೈ ನಹೀಂ, ಪ್ರಾಣ ತಜೈ ತೇಹಿ ಸಂಗ್ ॥ ೧೬ ॥

ಹರಿಣವು ಸಂಗೀತವನ್ನು ಕೇಳಿ ಏಕಾಗ್ರತೆಯಿಂದ ಆ ಕಡೆಗೆ ಮನಸ್ಸನ್ನು ಹರಿಸುವಂತೆ, ನಾಮಸ್ಮರಣೆಯ ಕಡೆಗೆ ನಿನ್ನ ಮನಸ್ಸನ್ನು ಓಡಿಸು. ಕಬೀರರು ಹೇಳುವುದೇನೆಂದರೆ, ಅದು ಆ ಸಂಗೀತವನ್ನು ಕೊನೆಯ ವರೆಗೂ ಕೇಳುತಿದ್ದು, ತನ್ನ ಪ್ರಾಣವನ್ನು ಸಹ ಅದರ ಜೊತೆಯಲ್ಲೇ ಬಿಟ್ಟುಬಿಡುತ್ತದೆ.

ಸುಮಿರನ ಸುರತ ಲಗಾಇಕೇ, ಮುಖ ತೇಂ ಕಛೂ ನ ಬೋಲ್ |
ಬಾಹರ ಕೇ ಪಟ ದೇಇಕೇ, ಅಂತರಕೇ ಪಟ ಖೋಲ್ || ೧೭ ||

ನೀನು ಪರಮಾತ್ಮನ ಸ್ಮರಣೆಯ ಕಡೆಗೆ ನಿನ್ನ ಮನಸ್ಸನ್ನು ಓಡಿಸಿ ಬಾಯಿಂದ ಏನೂ ಹೇಳಬೇಡ. (ಬಾಯಿ ಮುಚ್ಚಿಕೊ, ಮೌನವ್ರತವನ್ನು ಆಚರಿಸು) ಒಳಗಿನ ಬಾಗಿಲು ತೆರೆ. ಅರ್ಥಾತ್ ಆತ್ಮದ ಅನುಭವವನ್ನು ಮಾಡಿಕೊ.

ಮಾಲಾ ಫೇರತ ಜುಗಭಯಾ, ಫಿರಾ ನ ಮನಕಾ ಫೇರ್ |
ಕರಕಾ ಮನಕಾ ಡಾರಿದೇ, ಮನಕಾ ಹುನಕಾ ಫೇರ್ || ೧೮ ||

ಜಪಮಾಲೆ ತಿರುಗಿಸುತ್ತಾ-ತಿರುಗಿಸುತ್ತಾ ಯುಗ ಕಳೆಯಿತು. ಆದರೆ ಮನಸ್ಸಿನ ಭ್ರಮೆಯು ಇನ್ನೂ ದೂರವಾಗಿಲ್ಲ. ಆದುದರಿಂದ ನೀನು ಹಸ್ತದ ಮಣಿಮಾಲೆಯನ್ನು ಎಸೆದು ಮನಸ್ಸಿನ ಮಣಿಮಾಲೆಯನ್ನು ತಿರುಗಿಸು. ಆಡಂಬರಕ್ಕಾಗಿ ಕೇವಲ ಕೈಯಿಂದ ಮಾಲೆ ತಿರುಗಿಸುವುದನ್ನು ಬಿಟ್ಟುಬಿಟ್ಟು ಅಂತರ್ಮುಖನಾಗು.

ಕಬಿರಾ ಮಾಲಾ ಮನಹಿಂ ಕೀ, ಔರ್ ಸಂಸಾರಿ ಭೇಖ್ |
ಮಾಲಾ ಫೇರೇ ಹರಿ ಮಿಲ್ಹೈಂ, ಗಲೇ ರಹಂಟ ಕೇ ದೇಖ್ || ೨೦ ||

ಕಬೀರರು ಹೇಳುವುದೇನೆಂದರೆ, ಮಾಲೆಯು ಮನಸ್ಸಿನಲ್ಲಿ ಆಗಬಲ್ಲುದೇ ಹೊರತು ಬೇರೆ ಎಲ್ಲವೂ ಪ್ರಾಪಂಚಿಕ ವೇಷಗಳಾಗಿವೆ. ಮಾಲೆ ತಿರುಗಿಸುವ ಮಾತ್ರದಿಂದಲೇ ಈಶ್ವರನು ಸಿಕ್ಕಬಲ್ಲನಾದರೆ ರಾಟೆಯ ಮೇಲೆ ಸುತ್ತುವ ಮಾಲೆ (ನೀರು ಸೇದುವ ಹಗ್ಗ)ಯನ್ನು ನೋಡು.

ಕಬಿರಾ ಮಾಲಾಕಾ ಥಕೀ, ಬಹುತ ಜತನ ಕಾ ಫೇರ್ |
ಮಾಲಾ ಸ್ವಾಂಸ ಉಸಾಸಕೀ, ಜಾ ಮೆಂ ಗಾಂಠ ನಮೇರ್ |

ಕಬೀರರು ಹೇಳುತ್ತಾರೆ—ನಿನ್ನ ಹತ್ತಿರ ಮರದ ಮಾಲೆಯಿದೆ, ಅದನ್ನು ಪ್ರಯತ್ನಪೂರ್ವಕವಾಗಿ ತಿರುಗಿಸಬಹುದು. ಯಾವುದರಲ್ಲಿ ಗಂಟು ವಿಶ್ರಾ

ವಿಲ್ಲವೋ ಅಂಥ ಶ್ವಾಸೋಚ್ಛ್ವಾಸವೇ ಆತ್ಮಕಲ್ಯಾಣದ ನಿಜವಾದ ಮಾಲೆಯಾಗಿವೆ. ಅರ್ಥಾತ್ ಪ್ರತ್ಯೇಕ ಶ್ವಾಸೋಚ್ಛ್ವಾಸದ ಸಮಯದಲ್ಲಿ ನಾವು ಸ್ಮರಣೆಯಾಗುತ್ತಿರುವುದೇ ನಿಜ ಮಾಲೆಯಾಗಿದೆ. ಯಾಕೆಂದರೆ ಅದರಲ್ಲಿ ಬಂಧನವೂ ಇಲ್ಲ, ಮಿಶ್ರಣವೂ ಇಲ್ಲ.

ಸಹಜೇ ಹೀ ಧುನ ಹೋತ ಹೈ, ಹರ ದಮ ಘಟಕೇ ಮಾಹಿಂ ।
ಸುರತ ಶಬ್ದ ಮೇಲಾ ಭಯಾ, ಮುಖಕೀ ಹಾಜತ ನಾಹಿಂ ॥ ೨೨ ॥

ಹೃದಯದೊಳಗೆ ನಿರಂತರವೂ ಸಹಜ ಧ್ವನಿಯಾಗುತ್ತಿರುತ್ತದೆ. ಈಗ ಆತ್ಮದೊಡನೆ ಪರಮಾತ್ಮನ ಮಿಲನವಾಗಿದೆ. ಆದುದರಿಂದ ಅವನ ಹೆಸರನ್ನು ಬಾಯಿಯಿಂದ ಉಚ್ಚರಿಸುವ ಆವಶ್ಯಕತೆಯಿಲ್ಲ.

ಮಾಲಾ ತೋ ಕರಮೆಂ ಫಿರೈ, ಜೀಭ ಫಿರೈ ಮುಖ ಮಾಹಿಂ ।
ಮನುವಾಂ ತೋ ದಹುಂ ದಿಸಿ ಫಿರೈ, ಯಹ ತೋ ಸಮಿರನ ನಾಹಿಂ ॥ ೨೩ ॥

ಜಪಮಾಲೆಯು ಕೈಯಲ್ಲಿ ತಿರುಗಿದರೆ ನಾಲಗೆಯು ಬಾಯಲ್ಲಿ ತಿರುಗುತ್ತದೆ. ಮನಸ್ಸು ದಶದಿಕ್ಕುಗಳಲ್ಲೂ ತಿರುಗುತ್ತದೆ. ಇದು ಸ್ಮರಣೆ ಮಾಡುವ ರೀತಿಯಲ್ಲ.

ತನ ಥಿರ ಮನ ಥಿರ ಬಚನ ಥಿರ, ಸುರತ ನಿರತ ಥಿರ ಹೋಯ್ ।
ಕಹ ಕಬೀರ ಇಸ ಪಲಕ ಕೋ, ಕಲ್ಪ ನ ಪಾವೈ ಕೋಯ್ ॥ ೨೪ ॥

ಆತ್ಮವು ಪರಮಾತ್ಮನೊಡನೆ ಮಿಲನಗೊಂಡಾಗ ಶರೀರ, ಮನಸ್ಸು ಮತ್ತು ವಚನವು ಸೇರಿಕೊಳ್ಳುವುದು. (ಮನಸ್ಸು, ವಚನ ಮತ್ತು ಶರೀರದ ಚಂಚಲವೃತ್ತಿಗಳು ನಿಂತುಹೋಗುವುವು.) ಇಂಥ ಕ್ಷಣಗಳನ್ನು ಯಾವ ಕರ್ಮಕಾಂಡನೂ ಪಡೆಯುವುದಿಲ್ಲವೆಂದು ಕಬೀರರು ಹೇಳುತ್ತಾರೆ.

ಟಿಪ್ಪಣಿ: ಎರಡನೇ ಸಾಲಿಗೆ ಹೀಗೂ ಅರ್ಥ ಉಂಟು. ಆತ್ಮ ಮತ್ತು ಪರಮಾತ್ಮನ ಈ ಅಭೇದಾವಸ್ಥೆಯ ಕ್ಷಣವನ್ನು ಅನೇಕ ಕಲ್ಪಗಳ ವರೆಗೂ ಕೂಡ ಯಾರೂ ಹೊಂದಲಾರರು. (ಅನೇಕ ಕಲ್ಪಗಳ ತನಕ ತಪಸ್ಸು ಮಾಡಿಯೂ ಸಹ ಈ ಸುಖಾನುಭವವನ್ನು ಯಾರೂ ಪಡೆಯಲಾರರು.)

ಜಾಪ ಮರೈ ಅಜಪಾ ಮರೈ, ಅನಹದ ಹೂಂ ಮರಿ ಜಾಯ್ ।
ಸುರತ ಸಮಾನೀ ಸಬದಮೇಂ, ತಾಹಿ ಕಾಲ ನಹಿಂ ಖಾಯ್ ॥ ೨೫ ॥

ಜಪಮಾಡುವವನು ಸಾಯುತ್ತಾನೆ, ಜಪಮಾಡದವನೂ ಸಾಯುತ್ತಾನೆ. ನಿರಂತರವೂ ಆ ಶಬ್ದ ಕೇಳಿದವನೂ ಸತ್ತುಹೋಗುತ್ತಾನೆ. ಆದರೆ, ಯಾರ ಆತ್ಮವು ಪರಮಾತ್ಮನಲ್ಲಿ ಸಮಾವೇಶಗೊಂಡಿದೆಯೋ (ನರರೂಪದಿಂದ ನಾರಾಯಣ ರೂಪವಾಗಿದೆಯೋ) ಅವನನ್ನು ಮೃತ್ಯು ತಿನ್ನುವುದಿಲ್ಲ. ಅರ್ಥಾತ್ ಅವನಿಗೆ ಸಾವಿಲ್ಲ.

ಕಬಿರ ಭುದಾ ಹೈ ಕೂಕರೀ, ಕಗತ ಭಜನಮೆಂ ಭಂಗ್ ।
ಯಾಕೋ ಟುಕಡಾ ಡಾರಿಕೈ, ಸುಮಿರನ ಕರೋ ನಿಸಂಗ್ ॥ ೨೬ ॥

ಹಸಿವು ನಾಯಿಗೆ ಸಮಾನವಾಗಿದೆ. ಅದು ಭಜನೆಗೆ ಅಡ್ಡಿಮಾಡುತ್ತಿರುತ್ತದೆ. ಅದಕ್ಕೆ ಒಂದು ಚೂರು ರೊಟ್ಟಿ ಕೊಟ್ಟು ಶಂಕಾರಹಿತನಾಗಿ ಭಗವಂತನ ಭಜನೆಮಾಡು ಎಂದು ಕಬೀರರು ಹೇಳುತ್ತಾರೆ.

ತೂಂ ತೂಂ ಕರತಾ ತೂಂ ಭಯಾ, ಮುಝುಮೆಂ ರಹೀ ನಹೂಂ ।
ವಾರೀ ತೇರೇ ನಾಮುಪರ, ಜಿತ ದೇಖೂಂ ತಿತ ತೂಂ ॥ ೨೭ ॥

ಹೇ ಭಗವಾನ್! ನಾನು ನಿನ್ನನ್ನು ಸ್ಮರಿಸುತ್ತ ನಿನ್ನ ಸಮಾನವೇ ಆಗಿಹೋದೆ. ನನ್ನಲ್ಲಿ ಅಹಂಭಾವದ ಅಸ್ತಿತ್ವವು ಈಗ ಖಂಡಿತವಾಗಿ ಇಲ್ಲ. ನಾನು ನಿನ್ನ ಹೆಸರಿಗಾಗಿ ಹೆಣಗುತ್ತೇನೆ ನಾನೆಲ್ಲಿ ನೋಡಿದರೂ ನೀನೇ ನೀನಿದ್ದೀಯೆ. ನಾನೇ ನಾಶವಾದಾಗ ಕೇವಲ ನೀನೇ ನೀನು.

ಕಬಿರಾ ಕ್ಯಾ ಮೈಂ ಚಿಂತಹೂಂ, ಮಮ ಚಿಂತೇ ಕ್ಯಾ ಹೋಯ್ ।
ಮೇರೀ ಚಿಂತಾ ಹರಿ ಕರೈಂ, ಚಿಂತಾ ಮೋಹಿಂ ನ ಕೋಯ್ ॥ ೨೮ ॥

ನಾನು ನಿನ್ನ ಚಿಂತೆ ಏನು ಮಾಡಲಿ? ನಾನು ಚಿಂತಿಸುವುದರಿಂದ ಏನಾಗುವುದು? ಎಂದು ಕಬೀರರು ಹೇಳುತ್ತಾರೆ. ನನಗೆ ಯಾವ ಚಿಂತೆಯೂ ಇಲ್ಲ, ನನ್ನ ಚಿಂತೆಯನ್ನು ಸ್ವತಃ ಹರಿಯೇ ಮಾಡುತ್ತಾನೆ.

ಸಾಧೂ ಗಾಂಠನ ಬಾಂಧಈ, ಉದರ ಸಮಾತಾ ಲೇಯ್ ।
ಆಗೇ ಪೀಛೇ ಹರಿ ಖಡೇ, ಜಬಮಾಂಗೇ ತಬದೇಯ್ ॥ ೨೯ ॥

ಸಾಧು ತನ್ನ ಗಂಟಿನಲ್ಲಿ ಏನನ್ನೂ ಕಟ್ಟುವುದಿಲ್ಲ. (ಯಾವ ವಸ್ತುವನ್ನೂ ಮೊದಲೇ ಸಂಗ್ರಹಿಸಿ ಇಟ್ಟುಕೊಳ್ಳುದಿಲ್ಲ.) ಅವನು ತನ್ನ ಉದರ ಪೋಷಣೆಗೆ ಅಗತ್ಯವಿರುವಷ್ಟನ್ನೇ ತೆಗೆದುಕೊಳ್ಳುತ್ತಾನೆ. ಅವನ ಹಿಂದೆಯೂ

ಮುಂದೆಯೂ ದೇವರು ನಿಂತುಕೊಂಡಿರುವುದರಿಂದ, ಸಾಧುವು ಬೇಡಿದ ಕೂಡಲೇ ಅವನಿಗೆ ದೇವರು ಕೊಡುತ್ತಾನೆ.

ಪೌ ಫಾಟೇ ಪಗರಾ ಭಯಾ, ಜಾಗೇ ಜೀವಾ ಜೂನ್ ।
ಸಬ ಕಾಹೂ ಕೋ ದೇತ ಹೈ, ಚೋಂಚ ಸಮಾತಾ ಚೂನ್ ॥ ೩೦ ॥

ಉಷಃಕಾಲದ ಮೊದಲಿನ ಸಮಯವು ಮುಗಿದು ಬೆಳಗಾಗಿದೆ. ಎಲ್ಲಾ ಪ್ರಾಣಿಗಳೂ ಎಚ್ಚರಗೊಂಡಿವೆ. ಭಗವಂತನು ಯಾರಿಗೆ ಎಷ್ಟು ಆಹಾರ ಕೊಡಬೇಕೋ ಅದನ್ನು ಎಲ್ಲರಿಗೂ ಕೊಟ್ಟೇ ಕೊಡುತ್ತಾನೆ.

ಕರ್ಮ ಕರೀಮಾ ಲಿಖಿ ರಹಾ, ಸಬಕುಛ ಲಿಖಾ ನ ಹೋಯ್ ।
ಮಾಸಾ ಘಟೈ ನ ತಿಲ ಬಢೈ, ಜೋ ಸಿರ ಫೋಡೈ ಕೋಯ್ ॥ ೩೧ ॥

ಎಲ್ಲ ಜೀವಗಳ ಕರ್ಮವನ್ನು ವಿಧಾತ ಬರೆಯುತ್ತಿದ್ದಾನೆ. ಆದರೆ ಅವನಿಂದ ಎಲ್ಲವೂ ಬರೆಯಲಾಗುವುದಿಲ್ಲ. (ಅವನು ಏನು ಬರೆದಿದ್ದಾನೋ ಅದರಿಂದ ಯಾರಾದರೂ ತಲೆಹೊಡೆದರೂ ಕೂಡ ತೊಲದಷ್ಟೂ ಕಮ್ಮಿಯಾಗುವುದಿಲ್ಲ. ತಿಲದಷ್ಟೂ ಹೆಚ್ಚುವುದಿಲ್ಲ.)

ಸಾಂಈ ಇತನಾ ದೀಜಿಯೇ, ಜಾಮೇಂ ಕುಟುಂಬ ಸಮಾಯ್ ।
ಮೈ ಭೀ ಭೂಕಾ ನಾ ರಹೂಂ, ಸಾಧು ನ ಭೂಖಾ ಜಾಯ್ ॥ ೩೨ ॥

ಹೇ ಭಗವಂತ! ನನ್ನ ಕುಟುಂಬ ನಿರ್ವಹಣೆಗೆ ಬೇಕಾದಷ್ಟು, ನನ್ನ ಹಸಿವೆ ಹೋಗುವಷ್ಟು, ಮತ್ತು ಯಾವ ಸಾಧುವೂ ನನ್ನ ಮನೆಯಿಂದ ಹಸಿವೆಯೊಡನೆ ಹಿಂದಿರುಗದಷ್ಟು ಮಾತ್ರ ನನಗೆ ಕೊಡು.

ಪಾಂಡರ ಪಿಂಜರ ಮನ ಭಂವರ, ಅರಥ ಅನೂಪಮ ಬಾಸ್ ।
ಏಕ ನಾಮ ಸೀಂಚಾ ಅಮಿ, ಫಲ ಲಾಗಾ ಬಿಸ್ವಾಸ್ ॥ ೩೩ ॥

ಶರೀರವು ತಾವರೆ ಗಿಡಕ್ಕೆ ಸಮಾನವಾಗಿದೆ. ಮನಸ್ಸು ಅದರ ಮೇಲೆ ಹಾರಾಡುವ ದುಂಬಿಯಂತಿದೆ. ಅರ್ಥವೇ ಅದರ ವಿಚಿತ್ರ ಸುಗಂಧವಾಗಿದೆ. ಕಮಲರೂಪೀ ಶರೀರವು ನಾಮರೂಪೀ ಜಲದಿಂದ ಬೆಳೆದು ಅದರಲ್ಲಿ ವಿಶ್ವಾಸರೂಪೀ (ಶ್ರದ್ಧಾರೂಪೀ) ಅಮೃತಫಲವು ಬಿಟ್ಟಿತು.

ಗಾಯಾ ಜಿನ ಪಾಯಾ ನಹೀಂ, ಅನಗಾಏ ತೇಂ ದೂರಿ ।
ಜಿನ ಗಾಯಾ ಬಿಸ್ವಾಸ್ ಗಹಿ, ತಾಕೇ ಸದಾ ಹಜೂರಿ ॥ ೩೪ ॥

ಏಕಾಗ್ರಚಿತ್ತರಾಗದೆ ನಿನ್ನ ಸ್ಮರಣೆಮಾಡಿದವರು ನಿನ್ನನ್ನು ಹೊಂದಲಿಲ್ಲ ಮತ್ತು ನಿನ್ನ ಸ್ಮರಣೆಮಾಡದವರು ನಿನ್ನಿಂದ ದೂರವಾಗಿಯೇ ಇದ್ದಾರೆ. ಶ್ರದ್ಧೆಯೊಡನೆ ನಿನ್ನ ಧ್ಯಾನಮಾಡಿದವರ ಹತ್ತಿರ ನೀನು ಯಾವಾಗಲೂ ಇದ್ದೀಯೆ.

ಹಿರದೇ ಮಾಹೀಂ ಆರಸೀ, ಮುಖ ಪೇಖಾ ನಹಿಂ ಜಾಯ್ ।
ಮುಖತೌ ತಬಹೀ ದೇಖಈ, ದುಬಿಧಾ ದೇಇ ಬಹಾಯ್ ॥ ೩೫ ॥

ನಿನ್ನ ಹೃದಯುದಲ್ಲೇ ಆತ್ಮಜ್ಞಾನರೂಪೀ ಕನ್ನಡಿಯಿದೆ. ಆದರೆ (ವಿಕಾರದ ಕಾರಣದಿಂದಾಗಿ) ಪರಮಾತ್ಮ ಸ್ವರೂಪೀ ಮುಖವು ಕಾಣಿಸುವುದಿಲ್ಲ. ಅಸಮಂಜಸವಾದ ಕಾಮ-ಕ್ರೋಧಾದಿ ವಿಕಾರರೂಪಗಳನ್ನು ದೂರಮಾಡಿದರೆ, ಆಗ ನಿನಗೆ ನಿನ್ನ ಹೃದಯುದಲ್ಲಿ ಪರಮಾತ್ಮನ ದರ್ಶನವಾಗುವುದು.

ಪಢಾಗುನಾ ಸೀಖಾ ಸಭೀ, ಮಿಟಾ ನಸಂಸಯು ಸೂಲ್ ।
ಕಹ ಕಬೀರ ಕಾ ಸೋಂ ಕಹೂಂ, ಯಹ ಸಬ ದುಖ ಕಾ ಮೂಲ್ ॥ ೩೬ ॥

ನಾನು ಎಲ್ಲಾ ಶಾಸ್ತ್ರಗಳನ್ನೂ ಓದಿ ಕಲಿತುದು ಮಾತ್ರವಲ್ಲ. ಅವುಗಳ ಮನನ ಕೂಡ ಮಾಡಿದ್ದೇನೆ. ಹಾಗಿದ್ದೂ ಸಂಶಯುದ ಮುಳ್ಳು ಹೃದಯುದಿಂದ ಹೊರಬರಲಿಲ್ಲ. ನನ್ನ ಈ ಎಲ್ಲ ದುಃಖಗಳ ಮೂಲಕಾರಣವನ್ನು ಯಾರೊಡನೆ ನಾನು ಹೇಳಿಕೊಳ್ಳಲೆಂದು ಕಬೀರರು ಹೇಳುತ್ತಾರೆ.

ಚೀಂಟೀ ಚಾವಲ್ ಲೈಚಲೀ, ಬಿಚಮೆಂ ಮಿಲಗಇ ದಾಲ್ ।
ಕಹ ಕಬೀರ ದೋಉ ನಾಮಿಲೈ, ಇಕ ಲೇ ದೂಜೀ ಡಾಲ್ ॥ ೩೭ ॥

ಜೀವಾತ್ಮವು (ಇರುವೆ) ಬ್ರಹ್ಮದ (ಅಕ್ಕಿ) ಅನುಭವ ಪಡೆದು ಮುಂದೆ ಹೋಯಿತು. ಮಧ್ಯದಲ್ಲಿ ಅದಕ್ಕೆ ಮಾಯೆ (ಬೇಳೆ) ಸಿಕ್ಕಿತು. ಅದು ಎರಡನ್ನೂ ತೆಗೆದುಕೊಳ್ಳಲು ಇಚ್ಛಿಸುತ್ತದೆ. ಕಬೀರರು ಹೇಳುವುದೇನೆಂದರೆ ಒಂದೇ ಸಲ ಎರಡು ವಸ್ತುಗಳೂ ಸಿಕ್ಕುವುದಿಲ್ಲ. ಆದುದರಿಂದ ಒಂದನ್ನು ತೆಗೆದುಕೊಂಡು ಒಂದನ್ನು ಬಿಸಾಡು.

ಸತ್ತನಾಮ ಕಡುವಾಲಗೈ, ಮೀಠಾ ಲಾಗೈ ದಾಮ್ ।
ದುಬಿಧಾ ಮೆಂ ದೋಊ ಗಏ, ಮಾಯಾ ಮಿಲೀ ನ ರಾಮ್ ॥ ೩೮ ॥

ನಿನಗೆ ಬ್ರಹ್ಮದ ಹೆಸರು ಕಠೋರವಾಗುತ್ತದೆ(ಕರ್ಕಶ). ಹಣಕಾಸಿನ ಮಾತು ಸವಿಯಾಗಿರುತ್ತದೆ (ಇಂಪು). ಈ ಎರಡನ್ನೂ ಗಳಿಸುವ ದುವಿಧಾವಸ್ಥೆಯಲ್ಲಿ ನಿನ್ನ ಎರಡು ಕಣ್ಣುಗಳಲ್ಲೂ ನೀರು ತುಂಬಿಕೊಂಡವು. ಈ ದುಸ್ಥಿತಿಯಲ್ಲಿ ನಿನಗೆ ಮಾಯೆಯೂ ಸಿಗಲಿಲ್ಲ, ರಾಮನೂ ಸಿಗಲಿಲ್ಲ. (ಇಹವೂ ಇಲ್ಲ, ಪರವೂ ಇಲ್ಲ).

ಬಾಧೆಗಳು (ವಿಘ್ನಗಳು)

ಗುರು ಮಿಲಾ ನಾ ಶಿಷ ಮಿಲಾ, ಲಾಲನ ಖೇಲಾ ದಾಂವ್ ।
ದೋಊ ಬೂಢೇಧಾರಮೇಂ, ಚಢಿ ಪಾಥರ ಕೀ ನಾಂವ್ ॥ ೧ ॥

ಯೋಗ್ಯ ಗುರುವೂ ಸಿಗಲಿಲ್ಲ, ಯೋಗ್ಯ ಶಿಷ್ಯನೂ ಸಿಕ್ಕಲಿಲ್ಲ. ಇಬ್ಬರೂ (ಗುರು ಶಿಷ್ಯರು) ಸೇರಿಕೊಂಡು ಈಶ್ವರನನ್ನು ಜೂಜಿನಲ್ಲಿಟ್ಟು ಆಟವಾಡಿದರು. ಆದರೆ ಇಬ್ಬರೂ ಕಲ್ಲುದೋಣಿಯ ಮೇಲೇರಿ ಮಧ್ಯ ಮಾರ್ಗದಲ್ಲೇ ಮುಳುಗಿಹೋದರು. (ಸಾಂಸಾರಿಕ ಕರ್ಮಗಳಲ್ಲಿ ಲಿಪ್ತರಾಗಿ ಸಾಂಸಾರಿಕ ಮಾಯೆಯಲ್ಲಿಯೇ ಸಿಕ್ಕಿಕೊಂಡರು).

ಜಾನಂತಾ ಬೂಝಾ ನಹೀಂ, ಬೂಝಿಕಿಯಾ ನಹಿ ಗೌನ್ ।
ಅಂಧೇಕೋ ಅಂಧಾ ಮಿಲಾ, ರಾಹ ಬತಾವೇ ಕೌನ್ ॥ ೨ ॥

ಇಬ್ಬರೂ ಸತ್ಯಪಥವನ್ನು ತಿಳಿದೂ ಕೂಡ ಅದನ್ನು ಅರ್ಥಮಾಡಿಕೊಳ್ಳಲಿಲ್ಲ. ಅರ್ಥಮಾಡಿಕೊಂಡರೂ ಅದರಂತೆ ಆಚರಿಸಲಿಲ್ಲ. ಜ್ಞಾನರಹಿತನಾದ ಕುರುಡ ಶಿಷ್ಯನಿಗೆ ಅಜ್ಞಾನಿಯಾದ ಕುರುಡ ಗುರು ಸಿಕ್ಕಿದನು. ಇಂಥ ಸ್ಥಿತಿಯಲ್ಲಿ ಈ ಇಬ್ಬರಲ್ಲಿ ಯಾರು ಯಾರಿಗೆ ದಾರಿ ತೋರಿಸಬಲ್ಲರು?

ಬಂಧೇಕೊ ಬಂಧಾ ಮಿಲೈ, ಛೂಟೈ ಕೌನ ಉಪಾಯ್ ।
ಕರ ಸೇವಾ ನಿರ ಬಂಧಕೀ, ಪಲಮೆ ಲೇತ ಛುಡಾಯ್ ॥ ೩ ॥

ಯಾವನು ಸಾಂಸಾರಿಕ ಬಂಧನಗಳಲ್ಲಿ ಬಂಧಿತನಾಗಿದ್ದಾನೋ, ಅವನಿಗೆ ಸಂಸಾರದ ಝಂಝಾಟದಲ್ಲಿ ಬಂಧಿತನಾದವನೇ ಸಿಕ್ಕುತ್ತಾನೆ. ಅಂಥ ಪರಿಸ್ಥಿತಿಯಲ್ಲಿ ಅವನು ಆ ಬಂಧನಗಳಿಂದ ಹೇಗೆ ಬಿಡುಗಡೆ ಹೊಂದಿಯಾನು? ಆದ್ದರಿಂದ ನೀನು ಬಂಧನರಹಿತನಾದ ಈಶ್ವರನ ಸೇವೆ ಮಾಡು. ಅವನು ನಿನ್ನನ್ನು ಕ್ಷಣಮಾತ್ರದಲ್ಲಿ ಬಂಧನಮುಕ್ತನನ್ನಾಗಿ ಮಾಡುತ್ತಾನೆ.

ಬಾತ ಬನಾಈ ಜಗತಗಾ, ಮನ ಪರ ಮೋಧಾ ಸಾಹಿಂ ।
ಕಹ ಕಬೀರ ಮನ ಲೈಗಯಾ, ಲಖ ಚೌರಾಸೀ ಮಾಹಿಂ ॥ ೪ ॥

ಕೆಟ್ಟ ಗುರುವು ದೊಡ್ಡ ದೊಡ್ಡ ಉಪದೇಶಗಳ ಮೂಲಕ ಅನೇಕ ವಿಷಯಗಳನ್ನು ಮಾಡಿ ಪ್ರಪಂಚಕ್ಕೆಲ್ಲಾ ಮೋಸಮಾಡಿದನು. ಆದರೆ ತನ್ನ ಮನಸ್ಸಿಗೆ ಸಮಾಧಾನ ಹೇಳಲಿಲ್ಲ. ಕಬೀರನು ಹೇಳುವುದೇನೆಂದರೆ, ಅವನ ಚಂಚಲ ಮನಸ್ಸು ಅವನನ್ನು ೮೪ ಲಕ್ಷ ಜೀವಯೋನಿಗಳಿಗೆ ಕರೆದು ಕೊಂಡು ಹೋಯಿತು.

ನೀರ ಪಿಯಾವತ ಕ್ಯಾ ಫಿರೈ, ಘರ ಘರ ಸಾಯರ ಬಾರಿ ।
ತೃಷಾವಂತ ಜೊ ಹೋಇಗಾ, ಪೀವೈಗಾ ಝಖ ಮಾರಿ ॥ ೫ ॥

ನೀನು ಪ್ರತಿಯೊಬ್ಬರಿಗೂ ನೀರು ಕುಡಿಸುತ್ತಾ (ಉಪದೇಶಿಸುತ್ತಾ) ಏಕೆ ಸುತ್ತುತ್ತೀಯೆ? ಯಾಕೆಂದರೆ ಪ್ರತಿ ಮನೆಯಲ್ಲೂ ಸಮುದ್ರದ ಉಪ್ಪು ನೀರು ಇದೆ, ಅರ್ಥಾತ್ ಪ್ರತಿಯೊಂದು ಪ್ರಾಣಿಯೂ (ಮನುಷ್ಯನೂ) ಸಾಂಸಾರಿಕ ವಿಷಯಗಳಲ್ಲಿ ಹುಳುಗಿಹೋಗಿದ್ದಾನೆ. ಜ್ಞಾನದಾಹ ಹಿಡಿದ ಪುರುಷ ಸಮಯವನ್ನು ವ್ಯರ್ಥಮಾಡದೆ ತಾನೇ ತಾನಾಗಿ ಸದ್ಗುರುವಿನ ಬಳಿಗೆ ಹೋಗಿ ಉಪದೇಶರೂಪೀ ಅಮೃತವನ್ನು ಕುಡಿದುಕೊಳ್ಳುವನು.

ಸಿಷ ಸಾಖಾ ಬಹುತೇ ಕಿಏ, ಸತ ಗುರು ಕಿಯಾ ನಮಿತ್ತ ।
ಚಾಲೇ ಥೇ ಸತ ಲೋಕಕೋ, ಬೀಚಹಿಂ ಅಟಕಾ ಚಿತ್ತ ॥ ೬ ॥

ಅಸದ್ಗುರುವು ಶಿಷ್ಯರನ್ನು ಅನೇಕ ಭಿನ್ನ ಭಿನ್ನ ಶಾಖೆಗಳಾಗಿ ವಿಂಗಡಿಸಿದನು. ಅವನು ಸದ್ಗುರುವನ್ನು ತನ್ನ ಮಿತ್ರರನ್ನಾಗಿ ಮಾಡಿಕೊಳ್ಳಲಿಲ್ಲ. ಅಂಥ ಗುರು-ಶಿಷ್ಯರಿಬ್ಬರೂ ಸತ್ಯಲೋಕವನ್ನು ಸೇರಲು ಹೊರಟರು. ಮಧ್ಯದಲ್ಲೇ (ಸಂಸಾರದ ವಿಷಯವಾಸನೆಗಳಲ್ಲಿ) ಅವರ ಮನಸ್ಸು ಸಿಕ್ಕಿಕೊಂಡಿತು.

ಹರಿಯಾ ಜಾನೈ ರೂಖಡಾ, ಜೋ ಪಾನೀ ಕಾ ನೇಹ ।
ಸೂಖಾ ಕಾಠ ನ ಜಾನ ಹೀ, ಕೇ ತಹು ಬೂಡಾ ಮೇಹ ॥ ೭ ॥

ಹಸುರು ಮರವೇ ನೀರಿನ ಸ್ನೇಹದ ಅನುಭವವನ್ನು ಪಡೆಯುವುದನ್ನು ನೋಡು. ಒಣ ಮರದ ಕೊಂಬೆ ಮಳೆಯ ನೀರಿನಲ್ಲಿ ಎಷ್ಟು ಹೊತ್ತು ಮುಳುಗಿದ್ದರೂ ಕೂಡ ನೀರಿನ ಸ್ನೇಹವನ್ನು ತಿಳಿದುಕೊಳ್ಳುವುದಿಲ್ಲ.

ಕಬಿರಾ ಮೂಢಕ ಪ್ರಾನಿಯಾಂ, ನಖ ಸಿಖ ಪಾಖರ ಆದಿ |
ಬಾಹನ ಹಾರಾ ಕ್ಯಾ ಕರೈ, ಬಾನ ನ ಲಾಗೈ ತಾಹಿ || ೮ ||

ಕಬೀರರು ಹೇಳುತ್ತಾರೆ: ಮೂರ್ಖ ಪ್ರಾಣಿಗಳು ಯುದ್ಧ ಸಮಯದಲ್ಲಿ ನಖ(ಉಗುರು)ದಿಂದ ಶಿಖೆಯ ವರೆಗೆ ಆನೆ, ಕುದುರೆ ಮುಂತಾದ ಪ್ರಾಣಿಗಳ ಮೇಲೆ ಹಾಕುವ ಕಬ್ಬಿಣದ ಹಾಸಿಗೆಗೆ ಸಮಾನವಾಗಿರುತ್ತವೆ. (ಜಡ) ಇಂಥ ಮೂರ್ಖ ಪ್ರಾಣಿಗಳ ಮೇಲೆ ಉಪದೇಶರೂಪೀ ಬಾಣದ ನೋವಾಗುವುದಿಲ್ಲವೋ, ಆಗ ನಿಸ್ಸಹಾಯಕನಾದ ಉಪದೇಶಕನು ಏನು ಮಾಡಬೇಕು?

ಪಸುವಾ ಸೋಂ ಪಾಲಾ ಪರ್‍ಯೋ, ರಹುರಹು ಹಿಯಾ ನ ಖೀಜ್ |
ಊಸರ ಬೀಜ ನ ಊಗಸೀ, ಘಾಲೈ ದೂನಾ ಬೀಜ್ || ೯ ||

ಅಸಜ್ಜನ ವ್ಯಕ್ತಿರೂಪೀ ಹಸುವಿನಿಂದ ನೀನು ಸಾಕಲ್ಪಟ್ಟಿದ್ದೀಯೆ. ಆದುದರಿಂದ ಎಲೈ ಹೃದಯವೇ, ನೀನು ಶಾಂತವಾಗಿರು. ಕೋಪಿಸಿಕೊಳ್ಳಬೇಡ. ಕೆಟ್ಟ ವ್ಯಕ್ತಿಯು ಎರಡರಷ್ಟು ಬೀಜ ಬಿತ್ತಿದರೂ ಒಂದು ಸಸಿ ಹುಟ್ಟದಿರುವಂತ ಬಂಜರು ಭೂಮಿಯಂತಿದ್ದಾನೆ.

ಕಬಿರಾ ಚಂದನಕೇ ನಿಕಟ, ನೀಮ ಭೀ ಚಂದನ ಹೋಯ್ |
ಬೂಢೇ ಬಾಂಸ ಬಡಾಇಯಾ, ಯೋಂ ಜನಿ ಬೂಢೋ ಕೋಯ್ ||೧೦||

ಕಬೀರರು ಹೇಳುವುದೇನೆಂದರೆ: ಗಂಧದ ಮರದ (ಒಳ್ಳೆಯ ವ್ಯಕ್ತಿ) ಹತ್ತಿರವಿರುವುದರಿಂದ ಬೇವೂ ಕೂಡ (ಕೆಟ್ಟ ವ್ಯಕ್ತಿ) ಗಂಧವಾಗುತ್ತದೆ. ಸತ್ಪುರುಷನು ಸಂಸಾರರೂಪೀ ಸಮುದ್ರದಲ್ಲಿ ಮುಳುಗುತ್ತಿರುವ ಪ್ರಾಣಿಗಳನ್ನು ರಕ್ಷಿಸಲು (ತನ್ನ ಆದರ್ಶರೂಪೀ) ಗಳು(ಬೊಂಬು)ವನ್ನು ಮುಂದಿಟ್ಟಿದ್ದಾನೆ. ಮತ್ತು ಪ್ರತಿಯೊಬ್ಬರಿಗೂ ತನ್ನ ಅನುಕರಣಯೋಗ್ಯ ಜೀವನದ ಮೂಲಕ ಈ ರೀತಿ ಮುಳುಗಬೇಡಿರೆಂದು ಅವನು ಎಲ್ಲರಿಗೂ ಹೇಳುತ್ತಾನೆ.

ಚಾಲ ಬಕುಲಕೀ ಚಲತಹೈಂ, ಬಹುರಿ ಕಹಾ ವೈಂ ಹಂಸ್ |
ತೇ ಮುಕ್ತಾ ಕೈಸೇ ಚುಗ್ಗೈಂ, ಪರೈಂ ಕಾಲಕೇ ಫಂಸ್ || ೧೧ ||

ಕೆಟ್ಟವನು ಕೊಕ್ಕರೆಯಂತೆ ನಡೆಯುತ್ತಾನೆ. ಆದರೂ ಕೂಡ ಅವನು ತನ್ನನ್ನು ಹಂಸವೆಂದು ಹೇಳಿಕೊಳ್ಳಲು ಇಚ್ಛಿಸುತ್ತಾನೆ. ಹಂಸವು

ಮುತ್ತು ಆರಿಸಿ ನುಂಗುತ್ತದೆ. ಆದರೆ ಹಂಸದಂತೆ ವೇಷ ಧರಿಸುವ ಬಕ ಪಕ್ಷಿಯು ಮುತ್ತನ್ನು ಹೇಗೆ ಆರಿಸಬಲ್ಲದು? (ಈಶ್ವರನಲ್ಲಿ ಭಕ್ತಿಯನ್ನು ಹೇಗಿಡುವನು?) ಯಾಕೆಂದರೆ ಕೊಕ್ಕರೆಯಂತೆ ಆಡಂಬರದ ಭಕ್ತನಾದ ಕಾರಣ ಪ್ರಾರಂಭದಿಂದಲೇ ಯಮನ ಹಿಡಿತಕ್ಕೆ ಸಿಕ್ಕಿಕೊಂಡಿದ್ದಾನೆ.

ಸಾಧೂ ಭಯಾ ತೋ ಕ್ಯಾ ಭಯಾ, ಮಾಲಾ ಪಹರೀ ಚಾರ್ |
ಬಾಹರ ಭೇಸ ಬನಾಇಯಾ, ಭೀತರ ಭರೀ ಭಂಗಾರ್ ॥ ೧೨ ॥

ಕೆಟ್ಟ ವ್ಯಕ್ತಿಯು ನಾಲ್ಕು ಜಪಮಾಲೆಯನ್ನು ಧರಿಸಿ ಸಾಧುವಾದರೆ ಏನಾಯಿತು? ಅವನು ಹೊರಗಡೆಯ ವೇಷ ಹಾಕಿದ್ದಾನೆಯೇ ಹೊರತು ಅಂತರಂಗದಲ್ಲಿ ಅನೇಕ ದೋಷಗಳು ತುಂಬಿಕೊಂಡಿವೆ.

ಮಾಲಾ ತಿಲಕ ಲಗಾಇಕೇ, ಭಕ್ತಿ ನ ಆಯೀ ಹಾಥ್ |
ದಾಢೀ ಮೂಂಛ ಮುಂಡಾಇಕೇ, ಚಲೀ ದುನೀ ಕೇ ಸಾಥ್ ॥ ೧೩ ॥

ಮಾಲೆ ತಿರುಗಿಸಿ ಹಣೆಗೆ ತಿಲಕವಿಟ್ಟುಕೊಂಡ ಮಾತ್ರಕ್ಕೆ ಭಕ್ತಿಯು ಕೈಗೆ ಸಿಕ್ಕುವುದಿಲ್ಲ. ಯಾಕೆಂದರೆ ಅವನು ಗಡ್ಡಮೀಸೆಗಳನ್ನು ಬೋಳಿಸಿ ಪ್ರಪಂಚದೊಡನೆ ಸುತ್ತುತ್ತಾನೆ.

ದಾಢೀ ಮೂಂಛ ಮುಂಡಾಇಕೇ, ಹೂವಾ ಘೋಟಮ ಘೋಟ್ |
ಮನಕೋ ಕ್ಯೋಂ ನಹಿಂ ಮೂಂಡಿಏ, ಜಾಮೇ ಭರಿಯಾ ಖೋಟ್ ॥ ೧೪ ॥

ದುರ್ಜನ ವ್ಯಕ್ತಿಯು ಗಡ್ಡಮೀಸೆಗಳನ್ನು ತೆಗೆದು ತಲೆಯನ್ನೂ ಬೋಳಿಸಿ ಶುಚಿಯಾದರೆ ಲಾಭವೇನು? ಅವನು ಅನೇಕ ದೋಷಗಳು ತುಂಬಿಕೊಂಡಿರುವ ತನ್ನ ಮನಸ್ಸನ್ನೇಕೆ ಬೋಳಿಸುವುದಿಲ್ಲ?

ಮೂಂಡ್ ಮೂಂಡಿಏ ಹರಿ ಮಿಲೈ, ಸಬಕೋಇ ಲೇಇ ಮುಂಡಾಯ್ |
ಬಾರ ಬಾರ ಕೆ ಮೂಂಡನೇ, ಭೇಡ ನ ಬೈಕುಂಠ ಜಾಯ್ ॥ ೧೫ ॥

ತಲೆ ಬೋಳಿಸುವ ಮಾತ್ರದಿಂದಲೇ ದೇವರು ಸಿಕ್ಕುತ್ತಿದ್ದರೆ ಎಲ್ಲ ಜನರು ತಮ್ಮ ತಲೆಯನ್ನು ಬೋಳಿಸಿಕೊಳ್ಳುತ್ತಿದ್ದರು. ಜನರು ಕುರಿಗೆ ಆವಾಗಾವಾಗ ಬೋಳಿಸುತ್ತಾರಲ್ಲ. ಹಾಗಿದ್ದೂ ಅದು ಸ್ವರ್ಗಕ್ಕೆ ಏಕೆ ಹೋಗುವುದಿಲ್ಲ?

ಕೇಸ ನ ಕಹಾ ಬಿಗಾರಿಯಾ, ಜೋ ಮೂಂಡೋ ಸೌ ಬಾರ್ |
ಮನಕೋ ಕ್ಯೋಂ ನಹಿಂ ಮೂಂಡಿಏ, ಜಾಮೇಂ ಬಿಷೈ ಬಿಕಾರ್ ॥ ೧೬ ॥

ಅಸಹಾಯಕವಾದ ಕೂದಲುಗಳನ್ನು ನೂರಾರು ಸಲ ಕತ್ತರಿಸುತ್ತೀಯಲ್ಲ, ಅವು ನಿನಗೇನು ಹಿಂಸೆಕೊಟ್ಟವು? ಇದಕ್ಕೆ ಬದಲಾಗಿ ಅನೇಕ ವಿಷಯ ವಿಕಾರಗಳು ತುಂಬಿಕೊಂಡಿರುವ ಮನಸ್ಸನ್ನೇಕೆ ಬೋಳಿಸುವುದಿಲ್ಲ?

ಬಾಂಬೀ ಕೂಟೀ ಬಾವರೇ, ಸಾಂಪ ನ ಮಾರಾ ಜಾಯ್ |
ಮೂರಖ ಬಾಂಬೀ ನಾಡ ಸ್ಯೆ, ಸರ್ಪ ಸಬನ ಕೋ ಖಾಯ್ ॥ ೧೭ ॥

ಎಲೋ ಹುಚ್ಚ, ನೀನು ಹುತ್ತವನ್ನೇಕೆ ಹೊಡೆಯುತ್ತೀಯೆ? ಇನ್ನಿಂದ ಹಾವೇಕೆ ಕೊಲ್ಲಲ್ಪಡುವುದಿಲ್ಲ? ಎಲೋ ಮೂರ್ಖ, ಹುತ್ತವು ಪ್ರಾಣಿಯನ್ನು ಕೊಲ್ಲುವುದಿಲ್ಲ. ಸರ್ಪವೇ ಎಲ್ಲರನ್ನೂ ತಿಂದುಕೊಳ್ಳುತ್ತದೆ.

ಜೋ ಬಿಭೂತಿ ಸಾಧೂ ನ ತಜೀ, ತೇಹಿ ಬಿಭೂತಿ ಲಪಟಾಯ್ |
ಜೌವ ಬವನ ಕರಿ ಡಾರಿಯಾ, ಸ್ವಾನ ಸ್ವಾದ ಕರಿ ಖಾಯ್ ॥ ೧೮ ॥

ಸಾಧು ಸಂತರು ತ್ಯಜಿಸಿದ ಐಶ್ವರ್ಯದಲ್ಲೇ ಅಸಜ್ಜನರು ಅಂಟಿಕೊಂಡಿರುತ್ತಾರೆ. ಮನುಷ್ಯನು ವಮನ ಮಾಡಿದ ವಸ್ತುವನ್ನು ನಾಯಿಯು ಬಹಳ ರುಚಿಯಿಂದ ತಿನ್ನುತ್ತದೆ.

ಹೆಮ ಜಾನಾ ತುಮ ಮಗನ ಹೌ, ಕಹೇ ಪ್ರೇಮ ರಸ ಪಾಗಿ |
ರಂಚಕ ಪವನ ಕೇ ಲಾಗತೇ, ಉಠೇ ನಾಗ ಸೇ ಜಾಗಿ ॥ ೧೯ ॥

ನೀನು ಭಗವಂತನ ಪ್ರೇಮರಸದಲ್ಲಿ ಮುಳುಗಿ ಅವನ ಧ್ಯಾನದಲ್ಲೇ ತಲ್ಲೀನನಾಗುತ್ತಿದ್ದೀಯೆಂದು ನಾನು ತಿಳಿದುಕೊಂಡಿದ್ದೆ. ಆದರೆ (ವಚನರೂಪೀ) ವಾಯುವಿನ ಹಗುರವಾದ ಸ್ವಲ್ಪ ಆಘಾತಕ್ಕೇ ನೀನು ಸರ್ಪದಂತೆ ಬುಸುಗುಟ್ಟುತ್ತಾ ನಿಂತುಕೊಂಡೆ.

ಸಜ್ಜನ ತೋ ದುರ್ಜನ ಭಯಾ, ಸುನಿ ಕಾಹೂ ಕೋ ಬೋಲ್ |
ಕಾಂಸಾ ತಾಂಬಾ ಹ್ವೈ ರಹಾ, ನಹಿಂ ಹಿರಣ್ಯ ಕಾ ಮೋಲ್ ॥ ೨೦ ॥

ಯಾವನೋ ವಚನ ಕೇಳಿ (ಮೇಲಿಂದ ಮೇಲೆ ಕಾಣಿಸುವ) ಸಜ್ಜನನು ದುರ್ಜನನಾದ. ಚಿನ್ನವು ಕಂಚಾಗಿ ಮಾಡಿತೋ ಅದು ತಾಮ್ರವಾಗಿ ಹೋಯಿತು. ಅದರೊಡನೆ ಸುವರ್ಣಕ್ಕೆ ಮೌಲ್ಯವಿಲ್ಲವಾಯಿತು.

ಟಿಪ್ಪಣಿ: ಕಂಚು ಮತ್ತು ತಾಮ್ರ ಈ ಎರಡು ಧಾತುಗಳೂ ತಮ್ಮ ಗುಣ ಮತ್ತು ಬೆಲೆಯ ದೃಷ್ಟಿಯಿಂದ ಪರಸ್ಪರ ಕೆಲವು ವ್ಯತ್ಯಾಸಗಳನ್ನು

ಹೊಂದಿವೆ. ಕಂಚು ತಾಮ್ರಕ್ಕಿಂತ ಹೆಚ್ಚು ಶುದ್ಧವಾಗಿಯೂ ಬೆಲೆಯುಳ್ಳದ್ದಾಗಿಯೂ ಇದೆ. ಹಾಗಿದ್ದರೂ ಕೂಡ ಚಿನ್ನದೊಡನೆ ಅದು ಸಮನಾಗಲಾರದು. ಯಾಕೆಂದರೆ ಚಿನ್ನವು ಯಾವಾಗಲೂ ತನ್ನ ಮೂಲ ಸ್ವಭಾವವನ್ನು ಬಿಡುವುದಿಲ್ಲ. ಹೆಚ್ಚಾಗಿ ದುರ್ಜನರು ಸಮಾಜದಲ್ಲಿ ಗೌರವ ಪಡೆಯುವ ಸಲುವಾಗಿ ಆಗಾಗ ಸಜ್ಜನತೆಯ ವೇಷಹಾಕಿ ಜನರಿಗೆ ಮೋಸ ಮಾಡುತ್ತಿರುತ್ತಾರೆ. ಜನರು ಅವರ ಅಸಲೀ ಸ್ವಭಾವವನ್ನು ಅರಿಯದೆ ಕಂಚಿನಂತಿರುವ ಅವರನ್ನು ಗೌರವಿಸುತ್ತಾರೆ. ಆದರೆ ಅತೀ ಸಣ್ಣ ಕಟು ವಚನವನ್ನು ಕೇಳಿದಾಗ ಅವರು ತಮ್ಮ ನಿಜಸ್ವರೂಪಕ್ಕೆ ಬರುತ್ತಾರೆ. ಆಗ ಸಾಮಾನ್ಯ ಜನತೆಯ ಮುಂದೆ ತಾಮ್ರಕ್ಕೆ ಸಮಾನವಾದ ಅವರ (ಸಜ್ಜನರ ಸೋಗಿನಲ್ಲಿರುವವರ) ಸಣ್ಣ ರೂಪವು ಪ್ರಕಟವಾಗುವುದು. ದುರ್ಜನನು ಮೇಲಿಂದ ಎಷ್ಟೇ (ಸಜ್ಜನತೆಯ) ವೇಷ ಹಾಕಿದರೂ ಅವನು ನಿಜವಾದ ಸಂತನಿಗೆ ಅರ್ಥಾತ್ ಸುವರ್ಣಕ್ಕೆ ಸಮನಾಗಲಾರನು. ಆದಕ್ಕಾಗಿ ಜೀವನದಲ್ಲಿ ದೋಷರಹಿತನಾಗಿರುವುದು ಅವಶ್ಯಕವಾಗಿದೆ. ದುರ್ಜನನ ಜೀವನದಲ್ಲಿ ಅಜ್ಞಾತರೂಪದಿಂದ ಮರೆಯಾಗಿರುವ ದೋಷಗಳು ಕೆಲವು ಸಮಯದ ವರೆಗೆ ಉನ್ನತಸ್ಥಾನವನ್ನು ಸೇರಿದ್ದರೂ ಸಹ ಅವನನ್ನು ಕಂಚಿಗಿಂತ ಮೇಲಕ್ಕೆ (ಚಿನ್ನಕ್ಕೆ) ಕರೆದೊಯ್ಯಲಾರವು. ಯಾಕೆಂದರೆ ತಾಮ್ರ ಮತ್ತು ಸತುವಿನ ಸಮ್ಮಿಶ್ರಣರೂಪವಾದ ಕಂಚಿನ ರೀತಿಯಲ್ಲಿ ವ್ಯಕ್ತಿಯ ಜೀವನವೂ ಸಹ ಗುಣದೋಷಮಯವಾಗಿದೆ. ಅದೃಶ್ಯರೂಪದಲ್ಲಿರುವ ಈ ದೋಷಗಳು ಅವಕಾಶ ದೊರೆತಾಗ ಮೇಲೆದ್ದು ಬರುತ್ತವೆ. ಆಗ ತಾಮ್ರಕ್ಕೆ ಸಮ ತುಚ್ಛ ಧಾತುವಿನಂತಿಯೇ ಅವನ ದೋಷಮಯ ಜೀವನವು ಜನಸಾಮಾನ್ಯರ ಮುಂದೆ ಪ್ರಕಟವಾಗುತ್ತದೆ.

ಲೋಹೇ ಕೇರೀ ನಾವರೀ, ಪಾವನ ಗರುಅ ಭಾರ್ ।
ಸಿರಮೆಂ ವಿಷಕೀ ಮೋಟರೀ, ಉತರನ ಚಾಹೈ ಪಾರ್ ॥ ೨೧ ॥

ಕೆಟ್ಟ ಮನುಷ್ಯನ ಹತ್ತಿರ ಸಂಸಾರರೂಪೀ ಸಮುದ್ರದಿಂದ ಪಾರಾಗಲು ಕಬ್ಬಿಣದ ನೌಕೆಯಿದೆ—ವಿಷಯ ವಿಕಾರಗಳಿಂದ ಪರಿಪೂರ್ಣವಾದ ಶರೀರವಿದೆ. ಅದರಲ್ಲಿ ಕಲ್ಲುಗಳ (ವಿಷಯವಾಸನೆಗಳ) ದೊಡ್ಡ ಭಾರವೂ ತಲೆಯ ಮೇಲೆ ವಿಷದ (ಪಾಪದ) ಗಂಟೂ ಇದೆ. ಇಂಥ ಪರಿಸ್ಥಿತಿಯಲ್ಲಿ ಅವನು ಸಂಸಾರಸಾಗರವನ್ನು ದಾಟಲು ಇಷ್ಟಪಟ್ಟರೂ ಕೂಡ ಹೇಗೆ ದಾಟುತ್ತಾನೆ?

ಸಕಲೌ ದುರಮತಿ ದೂರಿ ಕರು, ಅಚ್ಛಾ ಜನಮ ಬನಾಉ ।
ಕಾಗ ಗವನ ಬುಧಿ ಛೋಡಿದೇ, ಹಂಸ ಗಮನ ಚಲ ಆಉ ॥ ೨೨ ॥

ಕುಬುದ್ಧಿಯನ್ನು ಪೂರ್ತಿಯಾಗಿ ಬಿಟ್ಟುಬಿಟ್ಟು ನಿನ್ನ ಈ ಜೀವನವನ್ನು ಪವಿತ್ರಮಾಡು. ಕಾಗೆಯಂತೆ ಅನೇಕ ನಡಿಗೆಯನ್ನು ನಡೆಯುವ ಬುದ್ಧಿಯನ್ನು ಬಿಟ್ಟು ಹಂಸಚಲನೆಯಂತೆ ನೇರ ಮಾರ್ಗದಲ್ಲಿ ನಡೆ.

ಚಂದನ ಸರ್ಪ ಲಪೇಟಿಯಾ, ಚಂದನ ಕಾಹ ಕರಾಯ್ ।
ರೋಮ ರೋಮ ಬಿಷಭೀನಿಯಾ, ಅಮೃತ ಕಹಾಂ ಸಮಾಯ್ ॥ ೨೩ ॥

ಗಂಧದ ಮರದ ಮೇಲೆ (ಸಂತ ಜನರ ಹತ್ತಿರ) ಸರ್ಪವು ಅಂಟಿಕೊಂಡಿದೆ. (ದುರ್ಜನರ ವಾಸಸ್ಥಳವಿದೆ) ಅದರ ಮೇಲೆ ಗಂಧವು (ಸಂತರು) ತನ್ನ ಪ್ರಭಾವವನ್ನು ಹೇಗೆ ಬೀರಬಲ್ಲುದು? ಯಾಕೆಂದರೆ ಆ ಸರ್ಪದ (ಸಂತನಲ್ಲದವನ) ರೋಮರೋಮದಲ್ಲೂ ವಿಷ (ವಿಕಾರ) ತುಂಬಿದೆ. ಇಂಥ ಸ್ಥಿತಿಯಲ್ಲಿ ಅದರಲ್ಲಿ ಅಮೃತವು ಹೇಗೆ ಸಮಾವೇಶಗೊಳ್ಳುತ್ತದೆ?

ಮಲಯಾಗಿರಿಕೇ ಬಾಸತೇಂ, ಬೇಧಾಢಾಕ ಪಲಾಸ್ ।
ಬೇನಾ ಕ ಬಹುಂ ನ ಬೇಧಿಯಾ, ಜುಗಜುಗ ರಹಿಯಾ ಪಾಸ್ ॥ ೨೪ ॥

ಮಲಯಪರ್ವತದ ಹತ್ತಿರವಿರುವುದರಿಂದ ಮುತ್ತುಗ(ಪಲಾಶ)ದ ಎಲೆಯೂ ಸಹ ಅದರ ಸುಗಂಧದಿಂದ ಪ್ರಭಾವಿತವಾಯಿತು. ಆದರೆ ಬಿದಿರು ಯುಗಯುಗದಿಂದಲೂ ಅದರ ಬಳಿಯಿದ್ದು ಕೂಡ ಯಾವಾಗಲೂ ಸುಗಂಧಮಯವಾಗಲಿಲ್ಲ. ಏಕೆಂದರೆ ಬಿದಿರು ಒಳಗೆ ಟೊಳ್ಳಾಗಿರುತ್ತದೆ.

ಜಹರ ಜಿಮೀಂ ದೈರೋಪಿಯಾ, ಅಮಿ ಸೀಂಚೈ ಸೌಬಾರ್ ।
ಕಬಿರಾ ಖಲಕ್ಕೈನಾ ತಜೈ, ಜಾಮೇಂ ಔನ ಬಿಚಾರ್ ॥ ೨೫ ॥

ನೀನು ಭೂಮಿಯಲ್ಲಿ ವಿಷವೃಕ್ಷವನ್ನು (ದುರ್ಜನ ವ್ಯಕ್ತಿಯನ್ನು) ಬೆಳೆಸಿದೆ. (ನಿನ್ನ ಹತ್ತಿರ ಇರಿಸಿಕೊಂಡೆ). ಮತ್ತು ಅದಕ್ಕೆ ಈಗ ದಿನಕ್ಕೆ ನೂರು ನೂರು ಸಲ ಅಮೃತ (ಸದುಪದೇಶ) ಹಾಯಿಸುತ್ತೀಯೆ. ಇದರಿಂದ ಲಾಭವೇನು? ಯಾರಲ್ಲಿ ಯಾವ ಯೋಚನೆಗಳಿವೆಯೋ ಅದನು ಅವರು ಮೃತ್ಯುಪರ್ಯಂತ ಬಿಡುವುದಿಲ್ಲವೆಂದು ಕಬೀರರು ಹೇಳುತ್ತಾರೆ.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ.

ಉಡುಪಿ, ದ. ಭಾರತ.

ಪಶ್ಚಿಮ ಕರಾವಳಿಯಲ್ಲಿ ನಮ್ಮ ಶಾಖೆಗಳು

ಮುಂಬಯಿ	ಗಂಗೊಳ್ಳಿ	ಕಾಂಞಂಗಾಡ್
ರತ್ನಗಿರಿ	ಕುಂದಾಪುರ	ನೀಲೇಶ್ವರ
ಮಾಲ್ವಾನ್	ಮಲ್ಪೆ	ಪಯ್ಯನೂರು
ವೆಂಗುರ್ಲ	ಉಡುಪಿ	ಕಣ್ಣಾನೂರು
ಕಾರವಾರ	ಕಾಪು	ತಲಚೇರಿ
ಗೋಕರ್ಣ	ಮುಲ್ಕಿ	ಬಡಗರ
ಕುಮಟಾ	ಮಂಗಳೂರು	ಕಲ್ಲಿಕೋಟೆ
ಹೊನ್ನಾವರ	ಕುಂಬಳೆ	ಕೊಚ್ಚಿ
ಭಟ್ಕಳ	ಕಾಸರಗೋಡು	ಅಲೆಪ್ಪಿ

ತೆತ್ತ ಭಂಡವಾಳ ರೂ. ೨೮ ಲಕ್ಷ.

ರಕ್ಷಾ ನಿಧಿ ರೂ. ೨೨ ಲಕ್ಷ.

The Canara Industrial & Banking Syndicate Ltd., Udipi.

Edited, Printed & Published by K. V. Shenoy
at The Prabhat Printers Ltd., Mangalore.